ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:01:ಯೋಜನೆ:ಅ.ಬಿ:2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:05-09-2019

## ಸುತ್ತೋಲೆ

ವಿಷಯ: ಯೋಜನಾ ವಿಭಾಗದಿಂದ ಬಿಡುಗಡೆಯಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಅನುದಾನ ಬಿಡುಗಡೆ ಆದೇಶ ಸಂಖ್ಯೆ:ಕಾಶಿಇ:01:ಯೋಜನೆ:ಅ.ಬಿ:2019-20 ದಿನಾಂಕ:01.06.2019, 07.06.2019, 28.06.2019, 26.07.2019

--*--

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019-20ನೇ ಸಾಲಿನಲ್ಲಿ ಉಲ್ಲೇಖಿತ ಆದೇಶಗಳಲ್ಲಿ ಲೆಕ್ಕಶೀರ್ಷಿಕೆ 2202-03-103-2-01 ಉಪಲೆಕ್ಕಶೀರ್ಷಿಕೆ (052) ಮತ್ತು (059) ರಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಪ್ರತಿ ಆದೇಶದಲ್ಲಿಯೂ ಅನುದಾನ ಬಳಸಿಕೊಂಡು ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಆದರೂ ಸಹ ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಅನುದಾನವನ್ನು ಬಳಸಿಕೊಂಡು ಇದುವರೆವಿಗೂ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವುದು ಖಜಾನೆ-2ರ ವೆಚ್ಚ ಪಟ್ಟಿಯಿಂದ ತಿಳಿದುಬಂದಿರುತ್ತದೆ (ಪ್ರತಿ ಲಗತ್ತಿಸಿದೆ). ಸರ್ಕಾರದಿಂದ ಬಿಡುಗಡೆ ಮಾಡಿರುವ ಎರಡು ತ್ರೈಮಾಸಿಕ ಕಂತಿನ ಅನುದಾನದಲ್ಲಿ ಪೂರ್ಣವಾಗಿ ವೆಚ್ಚ ಮಾಡದಿದ್ದಲ್ಲಿ ಸದ್ಯದಲ್ಲೇ ಸರ್ಕಾರದಿಂದ ಬಿಡುಗಡೆ ಮಾಡಲಿರುವ 3ನೇ ತ್ರೈಮಾಸಿಕ ಕಂತಿನ ಅನುದಾನವನ್ನು ತಡೆಹಿಡಿಯಲಿರುವ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.

ಆದ್ದರಿಂದ ಮೇಲ್ಕಂಡ ಆದೇಶಗಳಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು **ದಿ:11.09.2019** ಒಳಗಾಗಿ ವೆಚ್ಚಮಾಡಿ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಂತೆ ಹಾಗೂ ಅನುದಾನದ ಅಗತ್ಯತೆ ಇಲ್ಲದಿದ್ದಲ್ಲಿ ಕೂಡಲೇ ಮರು ಒಪ್ಪಿಸುವಂತೆ ತಿಳಿಸಲಾಗಿದೆ. ಅನುದಾನ ವೆಚ್ಚ ಮಾಡದೇ ಮೇಲಿನ ಕಂಡಿಕೆಯಲ್ಲಿ ತಿಳಿಸಿರುವಂತ 3ನೇ ತ್ರೈಮಾಸಿಕ ಕಂತಿನ ಅನುದಾನವನ್ನು ಸರ್ಕಾರ ತಡೆಹಿಡಿದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಈ ಹಿನ್ನೆಲೆಯಲ್ಲಿ ಅನುದಾನವನ್ನು ವೆಚ್ಚಮಾಡಿ ಬಳಕೆ ಪ್ರಮಾಣ ಪತ್ರಗಳನ್ನು ಕೆಳಕಂಡ ನಮೂನೆಯಲ್ಲಿ **ಪ್ರತಿ ಅನುದಾನ ಬಿಡುಗಡೆ ಆದೇಶಕ್ಕೆ ಸಂಬಂಧಿಸಿದ** ವಿವರಗಳನ್ನು **ಪ್ರತ್ಯೇಕವಾಗಿ** ನಮೂದಿಸಿ **ದಿ:11.09.2019** ಒಳಗಾಗಿ ಸಲ್ಲಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ನಮೂನೆ

ರೂ.ಗಳಲ್ಲಿ

| ಕ್ರ.ಸಂಖ್ಯ | ಅನುದಾನ ಬಿಡುಗಡೆ ಆದೇಶ ಸಂಖ್ಯೆ ಮತ್ತು ದಿನಾಂಕ | ಬಿಡುಗಡೆಯಾದ ಅನುದಾನದ ಮೊತ್ತ | ಖರ್ಚಾದ ಅನುದಾನದ ಮೊತ್ತ | ಉಳಿಕೆ ಅನುದಾನ |
|---|---|---|---|---|
| | | | | |

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1.ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

2. ಪ್ರಾಂಶುಪಾಲರು, ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕವಿತಾಳ, ಹರದನಹಳ್ಳಿ, -ಅಗತ್ಯ ಕ್ರಮಕ್ಕಾಗಿ ಯಾದಗಿರಿ, ಹಾವೇರಿ

ಪ್ರತಿಯನ್ನು:

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು -- ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.
2. ಕಛೇರಿ ಪ್ರತಿ

Plan_01_2019-20_Grant release